## ಬನ್ನಿ! ಈ ಅಭಿಯಾನದಲ್ಲಿ

- ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯ ಬೆಳಕಿನಲ್ಲಿ ಲಜ್ಜೆಯ ಸಂದೇಶವನ್ನು ಸಾರ್ವತ್ರಿಕಗೊಳಿಸಲು.
- ವಿದ್ಯಾರ್ಥಿನಿ ಮತ್ತು ಯುವತಿರಲ್ಲಿ ಲಜ್ಜೆ ಮತ್ತು ಮಾರ್ಯಾದೆಯ ಸರಿಯಾದ ಕಲ್ಪನೆಯನ್ನು ಮೂಡಿಸಲು
- ವಿದ್ಯಾರ್ಥಿನಿ ಮತ್ತು ಯುವತಿಯರನ್ನು ಲಜ್ಜಾವಂತರನ್ನಾಗಿಸಲು.
- ಪಾಶ್ಚತ್ಯ ಸಂಸ್ಕೃತಿಯ ದುಷ್ಪರಿಣಾಮ, ನಗ್ನತೆ, ಅಶ್ಲೀಲತೆಗಳಂತಹ ಕೆಡಕುಗಳ ನಿರ್ಮೂಲಗೊಳಿಸಲು.
- ವರ್ತಮಾನದಲ್ಲಿ ಘನತೆ, ಮಾನಮರ್ಯಾದೆಗಳಿಗೆ ಎದುರಾಗಿರುವ ಪಂಥಾಹ್ವಾನಗಳ ಬಗ್ಗೆ ಜಾಗೃತಿ ಮೂಡಿಸಲು.

**ನಾವೆಲ್ಲರು ಜತೆಗೂಡಿ ಶ್ರಮಿಸೋಣ.**


**Girls Islamic Organisation Karnataka**

# 2444, M. C. C. 'A' Block, 11th Main, 11th Cross,

Near Bakkeshwara High School, Davangere - 577004

Email: giokarnataka@gmail.com


# ಲಜ್ಜೆ – ನನ್ನ ಪ್ರತಿಬಿಂಬ

## ರಾಜ್ಯ ವ್ಯಾಪಿ ಅಭಿಯಾನ

**ನವೆಂಬರ್ 30ರಿಂದ ಡಿಸೆಂಬರ್ 9ರ ವರೆಗೆ**




**ಗರ್ಲ್ಸ್ ಇಸ್ಲಾಮಿಕ್ ಆರ್ಗನೈಝೇಶನ್ ಕರ್ನಾಟಕ**

ಅಲ್ಲಾಹನ ನಾಮದಿಂದ

ಇಂದು ಜಗತ್ತಿನಾದ್ಯಂತ ನಿರ್ಲಜ್ಜೆ ವ್ಯಾಪಕವಾಗಿ ಹರಡುತ್ತಿರುವುದು ನಮಗೆಲ್ಲರಿಗೂ ತಿಳಿದ ವಿಷಯ. ಆದರೆ ಈ ಪ್ರಮುಖ ಸಮಸ್ಯೆಯ ಗಂಭೀರತೆಯನ್ನು ಪರಿಗಣಿಸದಿರುವ ಒಂದು ದುರಂತ ಲೋಕವು ವೇಗವಾಗಿ ನಿರ್ಲಜ್ಜೆಯ ಕಪಿಮುಷ್ಟಿಯಲ್ಲಿ ಸಿಲುಕುತ್ತಿದೆ. ಸುಖಲೋಲುಪತೆಯ ಜೀವನ ಶೈಲಿ, ಅಂತರ್ಜಾಲ ಮತ್ತು ಮಾಧ್ಯಮಗಳ ಅನಿಯಂತ್ರಿತ ಬಳಕೆ ಮತ್ತು ದುರುಪಯೋಗ, ಜಾಹಿರಾತು ಜಗತ್ತಿನಲ್ಲಿ ಮಹಿಳೆಯರ ಅಸಭ್ಯ ಪ್ರದರ್ಶನ, ಸೌಂದರ್ಯ ಸ್ಪರ್ಧೆಗಳು ಇತ್ಯಾದಿ ವಿಷಯಗಳಿಂದಾಗಿ ನಿರ್ಲಜ್ಜೆಗೆ ಕಡಿವಾಣ ವಿಲ್ಲದಂತಾಗಿದೆ. ಫ್ಯಾಶನ್‌ನ ಹೆಸರಿನಲ್ಲಿ ಮಹಿಳೆಯರ ಉಡುಗೆ ತೊಡುಗೆಗಳಲ್ಲಿ ಅಜಾಗರೂಕತೆ ಮತ್ತು ಚಾರಿತ್ರ್ಯಹರಣ ಈ ಸಮಸ್ಯೆಯನ್ನು ಇನ್ನಷ್ಟು ಗಂಭೀರ ಮತ್ತು ಚಿಂತಾಜನಕವನ್ನಾಗಿಸಿದೆ. ನಮ್ಮ ಸುತ್ತಮುತ್ತಲಿನ ಅನಾರೋಗ್ಯಕರ ವಾತಾವರಣದಲ್ಲಿ ರೋಗವು ಉಲ್ಬಣಗೊಳ್ಳುವಂತೆಯೇ ನಿರ್ಲಜ್ಜೆಯು ಈ ಮೇಲಿನ ವಿಧಾನಗಳ ಮೂಲಕ ವೈರಸ್‌ನಂತೆ ಇನ್ನೂ ಹೆಚ್ಚು ಬೆಳೆಯುತ್ತಿದೆ.

ಈ ನಿರ್ಲಜ್ಜೆಯನ್ನು ಕೊನೆಗೊಳಿಸಿ ಲಜ್ಜಾವಂತರಾಗುವುದು ಏಕೆ? ನಿರ್ಲಜ್ಜೆಯ ಕಾರಣ ಮಹಿಳೆ ತನ್ನ ಸ್ಥಾನಮಾನ, ಗೌರವ ಮತ್ತು ಅಸ್ತಿತ್ವದ ಉದ್ದೇಶವನ್ನು ಕಳೆದು ಕೊಂಡು ಕೇವಲ ಒಂದು ಭೋಗ ವಸ್ತುವೆಂಬ ನಿಕೃಷ್ಟ ಮಟ್ಟಕ್ಕೆ ಇಳಿದು ಬಿಡುತ್ತಾಳೆಂಬುದೇ ಈ ಪ್ರಶ್ನೆಗೆ ಉತ್ತರವಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯ ಒಂದು ಮಹತ್ತರ ಪಾತ್ರ ಮುಂದೆ ಬರಬೇಕಾಗಿದೆ. ಅವಳು ಉಡುಗೆ, ನಡತೆ, ಮಾತು, ಚಾರಿತ್ರ್ಯ ಇತ್ಯಾದಿ ಪ್ರತಿಯೊಂದು ವಿಷಯಗಳಿಂದ ಲಜ್ಜೆಯ ಸಾಕಾರ ಮೂರ್ತಿಯಾಗಿ ಹೊರಹೊಮ್ಮಬೇಕು. ನಮ್ಮ ನಡೆ ನುಡಿಯೂ ನಮ್ಮ ವ್ಯಕ್ತಿತ್ವವನ್ನು ಪ್ರಕಟಿಸುತ್ತದೆ. ಆದ್ದರಿಂದ ನಮ್ಮ ಪ್ರತಿಯೊಂದು ಕಾರ್ಯದಿಂದ ಲಜ್ಜೆಯು ಬಲಗೊಳ್ಳುವಂತಾಗಲು ಮತ್ತು ನಮ್ಮ ಜೀವನದಿಂದಲೂ ಸಮಾಜದಿಂದಲೂ ನಿರ್ಲಜ್ಜೆಯು ಅಳಿದು ಹೋಗುವಂತೆ ಅತ್ಯಂತ ಜಾಗೃತರಾಗಬೇಕು. ಇದರಲ್ಲಿ ನಾವು ಯಶಸ್ವಿಯಾದರೆ ಇನ್ಶಾಅಲ್ಲಾಹ್ ಲೋಕದಲ್ಲಿ ನಿರ್ಲಜ್ಜೆಯ ಎಲ್ಲ ದ್ವಾರಗಳು ಮುಚ್ಚಿ ಹೋಗಬಹುದು.

ಒಬ್ಬ ಮಹಿಳೆಯ ಶೃಂಗಾರ, ಉಡುಗೆ, ನಡೆನುಡಿ, ನೆಂಟರಿಷ್ಟರೊಂದಿಗೆ ವ್ಯವಹಾರ ಎಲ್ಲವೂ ಒಂದು ಉದ್ದೇಶಕ್ಕನುಗುಣವಾಗಿರುವುದು. ದೇವನ ಸಂಪ್ರೀತಿಯ ಗಳಿಕೆಯೇ ಆ ಉದ್ದೇಶವಾಗಿರುವುದು. ಇದರಿಂದಲೇ ಮಹಿಳೆಯ ಲಜ್ಜೆಯು ಬೆಳೆಯುತ್ತಿರುವುದು ಎಲ್ಲವೂ ನಮ್ಮ ದೃಷ್ಟಿಯಲ್ಲಿ ಒಂದು ಲಜ್ಜಾವಂತ ಮಹಿಳೆಯ ಕಲ್ಪನೆಯಾಗಿದೆ. ಇಂತಹ ಲಜ್ಜಾವಂತ ಮಹಿಳೆಗೆ ಆಲಿಸುವ, ಹೇಳುವ ಮತ್ತು ಕಾರ್ಯ ಪ್ರವೃತ್ತರಾಗಿ ಸಾಮಾಜಿಕ ಜೀವನ ನಡೆಸುವ ವ್ಯವಹಾರ ನಡೆಸುವ ಸ್ವಾತಂತ್ರ್ಯ ಲಭ್ಯವಾಗುತ್ತದೆ. ಆದರೆ ಒಂದು ಮಿತಿಯೊಳಗೆ!

ಅಲ್ಲಾಹನು ಹೇಳುತ್ತಾನೆ, ಪೈಗಂಬರರೇ, ಸತ್ಯವಿಶ್ವಾಸಿನಿಯರೊಡನೆ ಹೇಳಿರಿ- ಅವರು ತಮ್ಮ ದೃಷ್ಟಿಗಳನ್ನು ಕೆಳಗಿರಿಸಿಕೊಳ್ಳಲಿ. ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳಲಿ ಮತ್ತು ತಮ್ಮ ಶೃಂಗಾರಗಳನ್ನು ತೋರಿಸದಿರಲಿ (ಆದರೆ) ಸ್ವಯಂ ಪ್ರಕಟವಾಗುವಂತಹವುಗಳನ್ನು ಹೊರತು... ಮತ್ತು ತಮ್ಮ ಎದೆಯ ಮೇಲೆ ತಮ್ಮ ಮೇಲು ಹೊದಿಕೆಯ ಸೆರಗನ್ನು ಹಾಕಿಕೊಂಡಿರಲಿ. ಅವರು ತಮ್ಮ ಶೃಂಗಾರವನ್ನು ಇತರರಿಗೆ ತೋರಿಸದಿರಲಿ...(ಸೂರ: ಅನ್ನೂರ್– 31)

ಪ್ರವಾದಿ(ಸ) ಹೇಳಿದರು: "ಲಜ್ಜೆ ಸತ್ಯವಿಶ್ವಾಸದ ಭಾಗವಾಗಿದೆ." ಆತ್ಮೀಯ ಸಹೋದರಿಯರೇ! ಬನ್ನಿ, ನಾವು ಲಜ್ಜೆಯ ರಕ್ಷಕರಾಗೋಣ. ಏಕೆಂದರೆ ಇದು ನಮ್ಮಿಂದ ನಮ್ಮ ಪಾಲಕ ಪ್ರಭುವಿನ ಬೇಡಿಕೆಯಾಗಿದೆ. ಸ್ವತಃ ಲಜ್ಜಾವಂತರಾಗಿ ಮಾತ್ರ ನಾವು ಇತರ ವಿದ್ಯಾರ್ಥಿನಿ–ಯುವತಿಯರನ್ನು ಲಜ್ಜೆಯ ರಕ್ಷಕರನ್ನಾಗಿ ಮಾಡಬಹುದು. ಲಜ್ಜೆಯ ರಕ್ಷಣೆಯಿಂದ ಮಾತ್ರ ನಮ್ಮ ವ್ಯಕ್ತಿತ್ವದಲ್ಲಿ ಸೌಂದರ್ಯ, ಕುಟುಂಬದಲ್ಲಿ ಬೆಳಕು ಮತ್ತು ಸಮಾಜದಲ್ಲಿ ಸಮೃದ್ಧಿ ಉಂಟಾಗಬಹುದು.

ಲಜ್ಜೆಯ ಸಂದೇಶವನ್ನು ಸಾರ್ವತ್ರಿಕಗೊಳಿಸಲು ಮತ್ತು ಅದರ ಮಹತ್ವ, ಅವಶ್ಯಕತೆಯನ್ನು ವಿವರಿಸಲು, ಗರ್ಲ್ಸ್ ಇಸ್ಲಾಮಿಕ್ ಆರ್ಗನೈಝೇಶನ್ ಕರ್ನಾಟಕದ ವತಿಯಿಂದ 10 ದಿನಗಳ ಅಭಿಯಾನವೊಂದನ್ನು 2012 ನವೆಂಬರ್ 30ರಿಂದ ಡಿಸೆಂಬರ್ 9ರ ವರೆಗೆ "ಲಜ್ಜೆ– ನನ್ನ ಪ್ರತಿಬಿಂಬ" ಎಂಬ ಕೇಂದ್ರೀಯ ವಿಷಯದಲ್ಲಿ ನಡೆಸುತ್ತಿದ್ದೇವೆ.

ಬನ್ನಿ! ಈ ಅಭಿಯಾನದ ಯಶಸ್ಸಿನಲ್ಲಿ ನಮ್ಮ ಸಕ್ರೀಯ ಪಾತ್ರ ವಹಿಸೋಣ.